## ಧಾರಾವಾಹಿಗಳಿಗೆ ಸಾವಿಲ್ಲ!

ಧಾರಾವಾಹಿಗಳು ಒಮ್ಮೆ ಆರಂಭಗೊಂಡರೆ ಮುಗಿಯುವುದೇ ಇಲ್ಲ. ಧಾರಾವಾಹಿಗಳು ಈ ವಾರ ಅಂತ್ಯವಾಗಬಹುದು, ಇಲ್ಲ ಮತ್ತೊಂದು ವಾರದಲ್ಲಿ ಅಂತ್ಯವಾಗಬಹುದು ಎಂದು ವೀಕ್ಷಕ ಅಂದುಕೊಂಡಿದ್ದರೆ ಅವು ತಪ್ಪು ಕಲ್ಪನೆ. ವರ್ಷಗಳು ಉರುಳಿದರೂ ಮನುಷ್ಯ ಸಾಯಬೇಕೆ ಹೊರತು ಧಾರಾವಾಹಿಗಳು ಮಾತ್ರ ಅಜರಾಮರ. ಅಮೃತವು ಕೂಡಾ ಹೆಚ್ಚು ಸೇವಿಸಿದರೆ ವಿಷವಾಗುತ್ತದೆ ಎಂಬುದಕ್ಕೆ ಕಲರ್ಸ್ ಕನ್ನಡ ವಾಹಿನಿಗಳಲ್ಲಿ ಪ್ರಸಾರವಾಗುತ್ತಿರುವ ಅಕ್ಕ, ಕುಲವಧು, ಲಕ್ಷ್ಮಿ ಬಾರಮ್ಮ, ಅಗ್ನಿಸಾಕ್ಷಿ, ಮನೆದೇವ್ರು, ಅಲ್ಲದೆ ಮಜಾ ಟಾಕೀಸ್ ಎಂಬ ಕಾರ್ಯಕ್ರಮಗಳೇ ಸಾಕ್ಷಿ. ಇನ್ನೂ 5 ವರ್ಷಗಳ ಕಾಲ ಇವು ಮುಂದುವರಿದರೂ ಆಶ್ಚರ್ಯವಿಲ್ಲ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ನಿರ್ಮಾಣ ಇಷ್ಟು ಸುಲಭವೇ?

ಧಾರಾವಾಹಿಗಳು ದಿಕ್ಕು ತಪ್ಪುತ್ತಿವೆ. ಸಾವಿನ ವೈಭವೀಕರಣ, ದ್ವೇಷ, ಅಸೂಯೆಗಳ ಪರಾಕಾಷ್ಠೆ, ದಂಪತಿಗಳ ಗುಪ್ತ ಸರಸ–ಸಲ್ಲಾಪಗಳನ್ನು ಪೂರ್ವಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಪೂರ್ಣ ಅರ್ಥ ಆಗುವಂತೆ ಚಿತ್ರಿಸುವ ಖಯಾಲಿಯಿಂದ ವೀಕ್ಷಕರಿಗೆ ಮುಜುಗರ ಆಗುತ್ತದೆ. ಕಾಮುಕರ ಅಟ್ಟಹಾಸ, ಬೆಂಗಳೂರು, ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಮಹಿಳೆಯನ್ನು ಅನಾಮತ್ ಎತ್ತೊಯ್ದ ದೃಶ್ಯಗಳು ಟಿವಿಯಲ್ಲಿ ಪ್ರಸಾರಗೊಂಡಿವೆ. ಇದೇ ರೀತಿ 'ಅಗ್ನಿಸಾಕ್ಷಿ'ಯಲ್ಲಿ ಪ್ರಾರಂಭಿಕ ಚಿತ್ರಣ (ಟೈಟಲ್) ಹೇಸಿಗೆ ಉಂಟು ಮಾಡುತ್ತದೆ.

ಇಂದಿನ ಧಾರಾವಾಹಿಗಳನ್ನು ನೋಡಿದಾಗ, ಯಾರು ಬೇಕಾದರೂ ಕತೆಗಳನ್ನು ಜೋಡಿಸಿ, ತಯಾರಿಸಬಹುದು ಎನಿಸುತ್ತದೆ.

—ರಮಾಮಣಿ ಗೌಡ, ಕನಕಪುರ

**ವಾರದ ಪತ್ರ**

## ಕಳಕಳಿಯೋ, ವಿಕೃತವೋ?

ಹೊಸ ವರ್ಷದ ಆಸುಪಾಸಿನಲ್ಲಿ ಬೆಂಗಳೂರಿನಲ್ಲಿ ನಡೆದ ತಥಾಕಥಿತ ಲೈಂಗಿಕ ಶೋಷಣೆಗಳನ್ನು ವರದಿ ಮಾಡುವಲ್ಲಿ ರಾಷ್ಟ್ರೀಯ ಮತ್ತು ಕನ್ನಡದ ಸುದ್ದಿ ವಾಹಿನಿಗಳು ಆತುರ ಮತ್ತು ಬೇಜವಾಬ್ದಾರಿ ತೋರಿವೆ. ಇಡೀ ಬೆಂಗಳೂರೇ ಕಾಮುಕರ ಅಡ್ಡೆ ಎಂಬಂತೆ ವಾಹಿನಿಗಳು ಕಂಠಶೋಷಿಸಿಕೊಳ್ಳುತ್ತಿದ್ದರೆ, ಎಂ.ಜಿ. ರಸ್ತೆಯ ಘಟನೆ ಕೆಲವೇ ವಿಕೃತ ವ್ಯಕ್ತಿಗಳ ಕೃತ್ಯವೆಂಬುದು ಹಾಗೂ ಕೆ.ಜಿ. ಹಳ್ಳಿಯ ಘಟನೆಯ ಯೋಜಿತ ನಾಟಕವೆಂಬುದು ಕೆಲವೇ ದಿನಗಳಲ್ಲಿ ಬಯಲಾಗಿದೆ! ಅಷ್ಟರೊಳಗೆ ವಾಹಿನಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿನ ಮರ್ಯಾದೆಯನ್ನು ಕಳೆದಾಗಿತ್ತು!

ಇನ್ನು, ಆ ಸಿಸಿಟಿವಿ ದೃಶ್ಯಗಳನ್ನು ದಿನಗಟ್ಟಲೆ, ಇಡೀ ದಿನ, ಸತತವಾಗಿ ತೋರಿಸುತ್ತಿದ್ದುದು ವಾಹಿನಿಗಳ ಉದ್ದೇಶವನ್ನೇ ಶಂಕಿಸುವಂತೆ ಮಾಡಿದೆ. ವಾಹಿನಿಗಳ ಈ ವರ್ತನೆಯು ನೀಲಿಚಿತ್ರ ತೋರಿಸಿ ಕಾಸು ಮಾಡಿಕೊಳ್ಳಲೆತ್ನಿಸುವವರ ವರ್ತನೆಗೆ ಸಮ. ಕನ್ನಡ ಜನಕೋಟಿಯೆಲ್ಲ ನೀಲಿಚಿತ್ರದ ಆಕಾಂಕ್ಷಿಗಳೆಂದು ವಾಹಿನಿಗಳು ಭಾವಿಸಿದ್ದರೆ ಅದಕ್ಕಿಂತ ದೊಡ್ಡ ಮೂರ್ಖತನ ಇನ್ನೊಂದಿಲ್ಲ. ಆ ಘಟನೆಗಳನ್ನು ಚರ್ಚಿಸುವ ಕಾರ್ಯಕ್ರಮಗಳಲ್ಲಿ, ಅಂತಹ ಘಟನೆಗಳು ಮರುಕಳಿಸಬಾರದೆಂಬ ಕಳಕಳಿಗಿಂತ ಹೆಚ್ಚಾಗಿ, ಘಟನೆಗಳ ಸಾರ್ವತ್ರೀಕರಣ, ವೈಭವೀಕರಣ, ಕನ್ನಡನಾಡಿನ ಮಾನಹನನ ಮತ್ತು ತಪ್ಪಿತಸ್ಥರನ್ನೆಲ್ಲ ತಾವೇ ತೀರ್ಮಾನಿಸಿ ಅವರನ್ನು ಪರಿಪರಿಯಾಗಿ ನಿಂದಿಸುವ ಯತ್ನ– ಇವೇ ಎದ್ದುಕಾಣುತ್ತಿದ್ದವು. ವಾಹಿನಿಗಳ ಇಂತಹ ನಡೆಯಿಂದ ಸಮಾಜಕ್ಕೆ ಯಾವ ರೀತಿಯ ಇತ್ಯಾತ್ಮಕ ಕೊಡುಗೆಯೂ ದೊರಕದು.

—ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

## ಪ್ರಕೃತಿ ದೇವತೆಗಳತ್ತ..

ಶ್ರೀ ಶಂಕರ ವಾಹಿನಿಯಲ್ಲಿ ಬೆಳಿಗ್ಗೆ 7.15ಕ್ಕೆ ಪ್ರಸಾರಗೊಳ್ಳುವ ಆದಿತ್ಯ ಸ್ತೋತ್ರ, 7.30 ಹಾಗೂ ರಾತ್ರಿ 7.30 ಕ್ಕೆ ಪ್ರಸಾರಗೊಳ್ಳುವ ಗಂಗಾ ಆರತಿಯು ಭಕ್ತಿ ಭಾವ, ಮಾಧುರ್ಯಗಳಿಂದ ತುಂಬಿವೆ. ಪ್ರಕೃತಿದತ್ತವಾದ ದೇವತೆಗಳ ಸೊಬಗಿನ ದೃಶ್ಯಕಾವ್ಯ ವೈಭವವನ್ನು ಕಟ್ಟಿಕೊಡುತ್ತಿರುವುದು ಸ್ತುತ್ಯರ್ಹ. ಯುಗಯುಗಾಂತರಗಳಿಂದಲೂ ನಮ್ಮ ಬದುಕಿಗೆ ನಿಕಟವರ್ತಿಗಳಾಗಿ ನಿತ್ಯಸತ್ಯಗಳಾದ ಜಗವ ಬೆಳಗುವ ಭಾನುತೇಜ ಹಾಗೂ ಜೀವಜಲ ಗಂಗಾವಾಹಿನಿಯ ಆರಾಧನೆಯ ಮಹತ್ವವನ್ನು ಅರ್ಥಪೂರ್ಣವಾದ ಬಿತ್ತರಿಸುತ್ತಿದೆ. ಇವು ಜ್ಯೋತಿಷಕ್ಕಿಂತ ಮೌಲ್ಯಯುಕ್ತವಾದ, ವೀಕ್ಷಣಾರ್ಹವಾದ ಕಾರ್ಯಕ್ರಮಗಳಾಗಿವೆ.

—ಪೂರ್ಣಿಮಾ ಮೂರ್ತಿ, ಬೆಂಗಳೂರು

## ಪ್ರಥಮ್ ಉಳಿದುಕೊಂಡಿದ್ದು ಅಚ್ಚರಿ

ಪ್ರತಿ ದಿನ 'ಬಿಗ್ ಬಾಸ್' ಮನೆಯಲ್ಲಿ ಪ್ರಥಮ ಎಂಬ ಮನುಷ್ಯನ ಪಾತಿನಿಧ್ಯ. ಮನೆಯ ಸದಸ್ಯರಿಗೆ ಬೇಡವಾದರೂ ಆತ ಈತನಕ ಉಳಿದುಕೊಂಡು ತರಲೆ ಮಾಡುತ್ತಿದ್ದಾನೆ. ಮನೆಯ ಸದಸ್ಯರ ಮಾತಿಗೆ 'ಬಿಗ್ ಬಾಸ್' ಕಿಮ್ಮತ್ತಿನ ಬೆಲೆಯನ್ನೂ ಇತ್ತಿಲ್ಲ. ಜನರ ಆಯ್ಕೆಯಿಂದ ಆತ ಉಳಿದುಕೊಂಡಿದ್ದಾನೆ ಎಂದು ಹೇಳಲಾಗುತ್ತಿದೆ. ಬಲವಂತವಾಗಿ ಈತ ಏಲಪ್‌ಯು ಹೇಳಿಸಿಕೊಂಡು ಇನ್ನೊಬ್ಬರ ವ್ಯಕ್ತಿತ್ವಕ್ಕೆ ಮಸಿ ಬಳಿದಿದ್ದಾನೆ. ತಾನು ಮಾತಾಡುವಾಗ ಯಾರೂ ಎದುರು ಅಥವಾ ಮಧ್ಯೆ ಮಾತಾಡಬಾರದು ಎನ್ನುವ ಧೋರಣೆಯುಳ್ಳವ, ಈತ ಬೇರೊಬ್ಬರ ನಾಯಕತ್ವ ಒಪ್ಪಿಕೊಳ್ಳುವುದಿಲ್ಲ. ಇತರರು ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ.

ಈ ವ್ಯಕ್ತಿಯನ್ನು ಜನರು ಇಷ್ಟಪಟ್ಟಿದ್ದಾರೆ ಎಂದರೆ ನಂಬಲು ಅಸಾಧ್ಯ. ಆರಂಭದಿಂದ ಈತನಕ ನಾಮಿನೇಟ್ ಆದರೂ ಈತನನ್ನು ಉಳಿಸಿಕೊಂಡು ಬಂದಿರುವುದನ್ನು ನೋಡಿದರೆ ಅನುಮಾನಗಳು ಉಂಟಾಗುತ್ತವೆ. ಈ ಮನೆಯ ಸದಸ್ಯರಿಂದ ಸಮಾಜಕ್ಕೆ ಯಾವುದೇ ಕಾಣಿಕೆ ಇಲ್ಲವೆಂಬುದಂತೂ ನಿಜ.

— ಪಿ.ಚಂದ್ರಕುಮಾ ಚಿತ್ರದುರ್ಗ.

## ಮನದ ಮೇಲೆ ಪ್ರಹಾರ

'ಬಿಗ್ ಬಾಸ್'ನಲ್ಲಿ ಮನುಷ್ಯರ ಮೇಲೆ ಪ್ರಹಾರ ನಿಷಿದ್ಧ ಎಂಬ ನಿಯಮವಿದೆ ಎಂಬುದು ತಿಳಿಯಿತು. ಆದರೆ ಮನಸ್ಸಿನ ಮೇಲೆ ಅವಾಚ್ಯ ಶಬ್ದಗಳ ಪ್ರಹಾರ ಎಷ್ಟರಮಟ್ಟಿಗೆ ಸರಿ? ಸಹ ಸ್ಪರ್ಧಿಗಳ ಮೇಲೆ ಸ್ಪರ್ಧಿಯೊಬ್ಬ ಪದೇ ಪದೇ ಅವಾಚ್ಯವಾಗಿ ನಿಂದಿಸಿದರೂ ಆತನ ಬಗ್ಗೆ ಯಾವುದೇ ಕ್ರಮವಿಲ್ಲ. ಏಕೆ?

—ಹೊ.ನಾ.ಲಲಿತ, ಬಿ. ಶ್ರೀಕಂಠಯ್ಯ, ಬೆಂಗಳೂರು

## ಮತಿಗೆಟ್ಟ ಭಾಷಾ ಪ್ರಯೋಗ

ಯಾರಾದರೂ ಹಗಲು ಮಲಗಿದರೆ 'ಎದ್ದೇಳು ಮಂಜುನಾಥ' ಹಾಡಿನೊಂದಿಗೆ ಎಬ್ಬಿಸುವ ಬಿಗ್ ಬಾಸ್, ರಿಷಿಕಾ–ಕಿಟ್ಟಿಯ ಇಂಗ್ಲಿಷ್ ಕಲಿಕೆಗೆ 'ನಾವಾಡುವ ನುಡಿಯೇ ಕನ್ನಡ ನುಡಿ' ಹಾಡಿನ ಮೂಲಕ ಎಚ್ಚರಿಸುವ ಬಿಗ್ ಬಾಸ್, ಏನೋ ಮಗನನ್ನು ನೋಡಿದ ಖುಷಿಯಲ್ಲಿ, ಭುವನ್‌ನ ಅಮ್ಮ ಕೊಡವದಲ್ಲಿ ಹೇಳಿದ್ದಕ್ಕೂ ಎಚ್ಚರಿಸುವ ಬಿಗ್ ಬಾಸ್, ಪ್ರಥಮ್ ಕೀರ್ತಿಯವರನ್ನುದ್ದೇಶಿಸಿ 'ಈಡಿಯಟ್, ಥರ್ಡ್‌ಕ್ಲಾಸ್, ಅಯೋಗ್ಯ ಥೂ...' ಎಂದು ಅವಾಚ್ಯ ಹಾಗೂ ಇಂಗ್ಲಿಷ್ ಶಬ್ದಗಳನ್ನು ಬಳಸುವಾಗ ಏಕೆ ಏನೂ ಮಾತನಾಡಲಿಲ್ಲ? ದಯವಿಟ್ಟು ಸಂಬಂಧಪಟ್ಟವರು ಉತ್ತರಿಸುವಿರಾ?

—ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

## ಮರುಪ್ರಸಾರ

ಸೀತಾರಾಂ ಅವರ 'ಮುಕ್ತ' ಧಾರಾವಾಹಿಯ ಮರುಪ್ರಸಾರ ಶುರುವಾಗಿದೆ. ಇಂದಿನ ಧಾರವಾಹಿಗಳ ದ್ವೇಷ, ಅಸೂಯೆ, ಕ್ರೌರ್ಯ, ಸೇಡು, ರೌಡಿಗಳ ಸಹವಾಸ ನೋಡಿ ರೋಸಿದ್ದ ವೀಕ್ಷಕರ ಮನಸ್ಸಿಗೆ ಹೊಸ ಗಾಳಿಯಂತೆ ಬಂದಿದೆ.

ಇದರಲ್ಲೂ ಕುಟುಂಬ ಕಲಹದ ನಡುವೆ ಹೊಂದಾಣಿಕೆ ಜೀವನದ ಅರಿವು ಇದೆ. ಸ್ವಾರ್ಥ, ಮೋಸ ಮಾಡಿದ್ದರೂ, ಅದನ್ನು ಕ್ಷಮಿಸಿ ಉದಾರತೆ ತೋರುವುದು. ಅದೇ ರೀತಿಯಲ್ಲಿ ರಾಜಕೀಯ ಕಚ್ಚಾಟ, ಯುವತಿಯರನ್ನು ಕಾಡುವ ಚಿತ್ರಣವೂ ಇದೆ. ಈ ಎಲ್ಲದನ್ನೂ ಮಿತಿಯಲ್ಲಿ ಹೇಳುವ ಕಲೆ ಇಲ್ಲಿದೆ.

—ಶ್ರೀನಾಥ್ ಕೊನೇಟಿ, ಬೆಂಗಳೂರು